ಓಎಸ್ 233/2021

ಪಿಡಬ್ಲ್ಯೂ 1

**ಸಾಕ್ಷಿಯು ದಿಃ 07.03.2026 ರಂದು ನ್ಯಾಯಾಲಯದಲ್ಲಿ ಹಾಜರಿದ್ದು ಪ್ರಮಾಣ ವಚನ ಭೋಧಿಸಲಾಯಿತು.**

**<u>ಪಾಟೀ ಸವಾಲು: 1ನೇ ಪ್ರತಿವಾದಿ ಪರ ವಕೀಲರಿಂದ</u>**

ನಿಪಿ 12 ದಾನಪತ್ರದ ಮೂಲಕ ನನ್ನ ತಂದೆ ಚಂದ್ರಪ್ಪ ಅವರ ಹೆಣ್ಣುಮಕ್ಕಳಿಗೆ ಆಸ್ತಿ ದಾನ ಮಾಡಿದ್ದಾರೆ. ಸದರಿ ದಾನಪತ್ರದಲ್ಲಿ 5 ಎಕರೆ ಜಮೀನನ್ನು ದಾನ ಮಾಡಿದ್ದಾರೆ, ಅದರ ಸರ್ವೇ ನಂಬರ್ ನನಗೆ ಗೊತ್ತಿಲ್ಲ. ದೇವಿರಮ್ಮ ನನ್ನ ಅಕ್ಕ ಎಂದರೆ ಸರಿ. ಸರ್ವೇ ನಂಬರ್ 59 ರಲ್ಲಿ 2 ಎಕರೆ 37 ½ ಗುಂಟೆ ಆಸ್ತಿಯನ್ನು ಚಂದ್ರಪ್ಪ ರವರು ದೇವಿರಮ್ಮ ರವರಿಗೆ ದನಾಪತ್ರದ ಮೂಲಕ ನೀಡಿದ್ದಾರೆ ಎಂದರೆ ಸರಿ. ದೇವಿರಮ್ಮ ರವರಿಗೆ ದಾನಪತ್ರದ ಮೂಲಕ ನೀಡಿದ ಆಸ್ತಿಯನ್ನು ಅವರ ಮರಣಾ ನಂತರ ಅವರ ಆಸ್ತಿಯನ್ನು ಬೇಸಾಯ ಮಾಡುತ್ತಿದ್ದರು. ಸದರಿ ದೇವಿರಮ್ಮ ರವರ ಮಕ್ಕಳು 2 ಎಕರೆ 37 ½ ಗುಂಟೆ ಜಮೀನನ್ನು ಮುಬಾರಕ್ ಅಲಿ ಬಿನ್ ಅಬ್ದುಲ್ ಜಫರ್ ಗುಂಡ್ಲುಪೇಟೆ ಟೌನ್ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸರ್ವೇ ನಂಬರ್ 59 ರಲ್ಲಿ 2 ಎಕರೆ 37 ½ ಗುಂಟೆ ಜಮೀನು ನನ್ನ ತಂದೆಗೆ ಇತ್ತು ಮತ್ತು ಅದನ್ನು ಅವರು ದೇವಿರಮ್ಮ ರವರಿಗೆ ದಾನಪತ್ರದ ಮೂಲಕ ನೀಡಿರುವುದರಿಂದ ನಮ್ಮ ತಂದೆಗೆ ಸರ್ವೇ ನಂಬರ್ 59 ರಲ್ಲಿ ಮತ್ತೆ ಯಾವುದೇ ಜಮೀನು ಇರುವುದಿಲ್ಲ ಎಂದರೆ ಸರಿ.

2. ಸರ್ವೇ ನಂಬರ್ 59 ರಲ್ಲಿ 2 ಎಕರೆ 37 ½ ಗುಂಟೆ ಜಮೀನು ಸಿದ್ದಪ್ಪ ಎಂಬುವವರಿಗೆ ಸೇರಿದ್ದು ಅವರು ಉಳುಮೆ ಮಾಡುತ್ತಿದ್ದರು ಎಂದರೆ ಸಾಕ್ಷಿಯು ನನ್ನ ಅಣ್ಣ ಸೋಮಣ್ಣ ರವರು ಉಳುಮೆ ಮಾಡುತ್ತಿದ್ದರು, ಅವರ ಮರಣಾ ನಂತರ 1ನೇ ಪ್ರತಿವಾದಿ ಉಳುಮೆ ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ. ಸರ್ವೇ ನಂಬರ್ 59 ರಲ್ಲಿ 2 ಎಕರೆ 37 ½ ಗುಂಟೆ ಜಮೀನನ್ನು ಸಿದ್ದಪ್ಪ ರವರು 1ನೇ ಪ್ರತಿವಾದಿ ನಾಗರಾಜಪ್ಪ ರವರಿಗೆ ದಿಃ 23.12.1997 ರಂದು ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 1ನೇ ಪ್ರತಿವಾದಿಯು ಗುಂಡ್ಲುಪೇಟೆ ಟೌನ್ ನಲ್ಲಿ ವಾಸ

ಇದ್ದು ಸುಮಾರು 45 ವರ್ಷಗಳಿಂದ ಗಣಪತಿ ದೇವಸ್ಥಾನದ ಅರ್ಚಕರಾಗಿದ್ದಾರೆ ಎಂದರೆ ಸರಿ. 1ನೇ ಪ್ರತಿವಾದಿಯು ಬಟ್ಟೆಯ ವ್ಯಾಪಾರ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. 1ನೇ ಪ್ರತಿವಾದಿಯು ಗುಂಡ್ಲುಪೇಟೆಗೆ ಬಂದು ವಾಸ ಮಾಡಲು ಶುರು ಮಾಡಿ ಎಷ್ಟು ವರ್ಷಗಳಾಗಿವೆ ಎಂದು ನನಗೆ ಗೊತ್ತಿಲ್ಲ, ಆದರೆ ನನ್ನ ಮದುವೆಗೆ ಮುಂಚೆಯೇ ಗುಂಡ್ಲುಪೇಟೆಯಲ್ಲಿ ವಾಸ ಮಾಡಲು ಶುರು ಮಾಡಿದ್ದರು ಎಂದು ನುಡಿಯುತ್ತಾರೆ. 1ನೇ ಪ್ರತಿವಾದಿಯು ಗುಂಡ್ಲುಪೇಟೆಯಲ್ಲಿ ವಾಸ ಮಾಡಲು ಶುರು ಮಾಡಿದ ನಂತರ ಅವರ ಕುಟುಂಬದ ಹಣಕಾಸಿನ ವ್ಯವಹಾರವನ್ನು ಪ್ರತ್ಯೇಕವಾಗಿ ಮಾಡುತ್ತಾ ಬಂದಿದ್ದಾರೆ ಎಂದರೆ ಸಾಕ್ಷಿಯು ಇಲ್ಲ ಒಟ್ಟು ಕುಟುಂಬದಲ್ಲಿ ಮಾಡುತ್ತಾ ಬಂದಿದ್ದಾರೆ ಎಂದು ನುಡಿಯುತ್ತಾರೆ. ನನ್ನ ಅಣ್ಣ ಸೋಮಣ್ಣ ರವರು ಮೃತಪಟ್ಟು ಸುಮಾರು 25 ವರ್ಷಗಳು ಕಳೆದಿವೆ. ಸದರಿ ಸೋಮಣ್ಣ ಹಾಗೂ 1ನೇ ಪ್ರತಿವಾದಿಯು ಸುಮಾರು 50 ವರ್ಷಗಳಿಂದಲೂ ಪ್ರತ್ಯೇಕವಾಗಿ ವಾಸ ಇದ್ದು ಪ್ರತ್ಯೇಕವಾಗಿ ವ್ಯವಹಾರ ಮಾಡಿಕೊಂಡು ಬಂದಿದ್ದಾರೆ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. 1ನೇ ಪ್ರತಿವಾದಿಯು ಗಣಪತಿ ದೇವಸ್ಥಾನದ ಅರ್ಚಕರಾಗಿದ್ದರಿಂದ ಅದರಿಂದ ಅವರಿಗೆ ಮೊದಲಿನಿಂದಲೂ ಸಂಪಾದನೆ ಇದೆ ಎಂದರೆ ಸರಿ. ಸದರಿ ಸಂಪಾದನೆಯಿಂದ 1ನೇ ಪ್ರತಿವಾದಿಯು ಸಿದ್ದಪ್ಪ ರವರಿಂದ ಸರ್ವೇ ನಂಬರ್ 59 ರಲ್ಲಿ 2 ಎಕರೆ 37 ½  ಜಮೀನನ್ನು ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಆಸ್ತಿಯು 1ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಯಾಗಿರುವುದರಿಂದ ಅದರಲ್ಲಿ ನನಗೆ ಯಾವುದೇ ಹಕ್ಕಿಲ್ಲ ಎಂದರೆ ಸರಿಯಲ್ಲ.

3. ಸರ್ವೇ ನಂಬರ್ 59 ರಲ್ಲಿ 2 ಎಕರೆ 37 ½ ಗುಂಟೆ ಜಮೀನನ್ನು ದೇವಿರಮ್ಮ ಮತ್ತು ನನ್ನ ಭಾಗಕ್ಕೆ ದಾನಪತ್ರದ ಮೂಲಕ ನೀಡಿರುವ ಆಸ್ತಿಯಾಗಿರುತ್ತದೆ ಎಂದರೆ ಸರಿ. ಸದರಿ ಜಮೀನನ್ನು ಮಾರಾಟ ಮಾಡಿ 2006 ರಲ್ಲಿ ನಾನು ಮತ್ತು ದೇವಿರಮ್ಮ ರವರ ಮಕ್ಕಳು ಹಂಚಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸರ್ವೇ ನಂಬರ್ 60 ರಲ್ಲಿರುವ 4 ಎಕರೆ 21 ಗುಂಟೆ ಸೋಮಣ್ಣ ಮತ್ತು 1ನೇ ಪ್ರತಿವಾದಿಯ ಹಿಸ್ಸೆಗೆ ಬಂದಿರುವ ಜಮೀನಾಗಿರುತ್ತದೆ ಎಂದರೆ ಸರಿಯಲ್ಲ.  1962ನೇ ಇಸವಿಯಲ್ಲಿಯೇ ನನ್ನ ತಂದೆ ಮತ್ತು ನನ್ನ ಅಣ್ಣ ತಮ್ಮಂದಿರೂ ಹಾಗೂ

ಓಎಸ್ 233/2021

ಪಿಡಬ್ಲ್ಯೂ 1

ಅಕ್ಕ ಮತ್ತು ನನ್ನ ನಡುವೆ ವಿಭಾಗವಾಗಿರುವ ದಾವ ಆಸ್ತಿಗಳಲ್ಲಿ ನನಗೆ ಯಾವುದೇ ಹಿಸ್ಸೆ ಇರುವುದಿಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** 3, 5 ರಿಂದ 8ನೇ ಪ್ರತಿವಾದಿಗಳು ಗೈರು ಹಾಜರಿದ್ದು, ಪ್ರತಿವಾದ ಪತ್ರ ಸಲ್ಲಿಸದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ದೀಪು ಎಂ.ಟಿ.)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಗುಂಡ್ಲುಪೇಟೆ